ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಐವಾನ-ಎ-ಶಾಹಿ ಪ್ರದೇಶ ಕಲಬುರಗಿ

ಸಂಖ್ಯೆ::ಸಿ4(1)ಪ್ರೌಶಾಶಿ/ವರ್ಗ/14/2015-16 ದಿನಾಂಕ :06-08-2015

## ಟಿಪ್ಪಣಿ

ವಿಷಯ:- 2015 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಬರುವಾಗ ದಾಖಲೆ/ಮಾಹಿತಿಗಳನ್ನು ತರುವ ಬಗ್ಗೆ,

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2015ನೇ ಸಾಲಿನ 2015 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಶಿಕ್ಷಕರು ಹಲವಾರು ದಾಖಲೆ/ಮಾಹಿತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಪರಸ್ಪರ ವರ್ಗಾವಣೆಯ ಕೌನ್ಸಿಲಿಂಗ್‌ಗೆ ಬರುವಾಗ (ಮಾಹಿತಿ/ದಾಖಲೆಗಳು, ಮುಚ್ಚಳಿಕೆ ಪತ್ರ ಹಾಗೂ ದೃಡೀಕರಣ ಪತ್ರ) ಈ ಪತ್ರಕ್ಕೆ ಲಗತ್ತಿಸಿರುವ ಮಾಹಿತಿ/ದಾಖಲೆಗಳನ್ನು ತಪ್ಪದೇ ತರಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರ್ಗಿ

ಇವರಿಗೆ :

ಈ ಕಛೇರಿಯ ಕಂಪ್ಯೂಟರ್ ಪ್ರೋಗ್ರಾಮರ್ ಇವರಿಗೆ ಸದರಿ ಮಾಹಿತಿಗಳನ್ನು ಕಛೇರಿಯ ವೆಬ್‌ಸೈಟ್‌ಗೆ ಅಳವಡಿಸುವಂತೆ ಸೂಚಿಸಿದೆ.

## ಪರಸ್ಪರ ವರ್ಗಾವಣೆಗೆ ಬಿರುವ ಪ್ರತಿ ಶಿಕ್ಷಕರು ತರಲೇಬೇಕಾದ ದಾಖಲೆಗಳು/ಮಾಹಿತಿಗಳು

1) ಅರ್ಜಿದಾರರ ಅರ್ಜಿಯ ಪ್ರತಿ.
2) ಬಿ.ಇ.ಓ. ಸ್ವೀಕೃತಗೊಂಡ ಅರ್ಜಿಯ ಪ್ರತಿ
3) ನೇಮಕಾತಿ ಆದೇಶದ ಪ್ರತಿ.
4) ಪರಿವೀಕ್ಷಣಾ ಅವಧಿ ತೃಪ್ತಿಕರವೆಂದು ಘೋಷಿಸಿರುವ ಬಗ್ಗೆ ದೃಢೀಕೃತ ಪ್ರತಿ
5) ಸೇವಾ ಪ್ರಮಾಣ ಪತ್ರ
6) ವೇತನ ಪ್ರಮಾಣ ಪತ್ರ (ಎಚ್.ಆರ್.ಎಮ್.ಎಸ್ ಪ್ರತಿ)
7) ಈಗಾಗಲೇ 01-09-2007ರ ನಂತರ ಘಟಕದ ಹೊರಗೆ ವರ್ಗಾವಣೆಯಾಗಿದ್ದಲ್ಲಿ ಅದರ ದೃಡೀಕೃತ ಪ್ರತಿ
8) ಮುಚ್ಚಳಿಕೆ ಪತ್ರ ಬಿ.ಇ.ಓರವರಿಂದ ದೃಢೀಕೃತ ಪತ್ರ (ಮಾದರಿ ಪ್ರತಿ ಲಗತ್ತಿಸಿದೆ)
9) ಬಿ.ಈ.ಓ ರವರಿಂದ ದೃಢೀಕರಣ ಪತ್ರ (ಮಾದರಿ ಪ್ರತಿ ಲಗತ್ತಿಸಿದೆ)
10) ಇಬ್ಬರೂ ಶಿಕ್ಷಕರ ಸಹಮತಿ ಪತ್ರ. (ಮಾದರಿ ಪ್ರತಿ ಲಗತ್ತಿಸಿದೆ)

ಮುಚ್ಚಳಿಕೆ ಪತ್ರ

ಈ ಮೂಲಕ ನಾನು ಶ್ರೀ/ಶ್ರೀಮತಿ: ______________________________
ಬರೆದುಕೊಡುವುದೇನೆಂದರೆ

1. ವರ್ಗಾವಣೆ ಶಾಸನ ಹೊರಡಿಸಿದ ನಂತರ ಅಂದರೆ ದಿನಾಂಕ:01–09–2007 ರ ನಂತರ ನನ್ನ ಇದೇ ಮೊದಲ ಬಾರಿ ಪರಸ್ಪರ ವರ್ಗಾವಣೆಯಾಗಿರುತ್ತದೆ
2. ಇದೇ ಮೋದಲು ಬಾರಿ ಘಟಕದ ಹೊರಗಿನ ವರ್ಗಾವಣೆಗೆ ಬಯಸಿರುತ್ತೇನೆ.
3. ಪ್ರಸ್ತುತ ಸ್ಥಳದಲ್ಲಿ 3 ವರ್ಷಗಳ ಸೇವೆಯನ್ನು ಪೂರೈಸಿರುತ್ತೇನೆ
4. ನನ್ನ ನಿವೃತ್ತಿಗೆ ಇನ್ನು ಮೂರು ವರ್ಷಗಳಿಗಿಂತ ಅಧಿಕ ಸೇವಾ ಅವಧಿಯು ಇರುವುದು
5. ಪ್ರಸ್ತುತ ನಾನು ಮನಸಾಪೂರ್ವಕ ಒಪ್ಪಿಕೊಂಡು ವರ್ಗಾವಣೆ ಪಡೆಯಲು ಒಪ್ಪಿಗೆ ನೀಡಿರುತ್ತೇನೆಂದು ಹಾಗೂ ಪ್ರಸ್ತುತ ಪರಸ್ಪರ ವರ್ಗಾವಣೆ ಸಲ್ಲಿಸಿರುವ ದಾಖಲೆಗಳು/ಮಾಹಿತಿಗಳು ಸತ್ಯದಿಂದ ಕೂಡಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಒಂದುವೇಳೆ ನಾನು ಸಲ್ಲಿಸಿದ ದಾಖಲೆಗಳು/ಮಾಹಿತಿಗಳು ತಪ್ಪು ಎಂದು ಕಂಡು ಬಂದಲ್ಲಿ ಇಲಾಖೆಯು ಕೈಕೊಳ್ಳುವ ಕ್ರಮಕ್ಕೆ ನಾನು ಬದ್ದನಾಗಿರುತ್ತೇನೆ.

ಸಹಿ
ವರ್ಗಾವಣೆ ಬಯಸಿರುವ ಶಿಕ್ಷಕರ ಹೆಸರು
ಮತ್ತು ಶಾಲೆಯ ಹೆಸರು

ಧೃಢೀಕರಿಸಲಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
______________
ಜಿಲ್ಲೆ __________

ದೃಢೀಕರಣ ಪತ್ರ

ಈ ಮೂಲಕ ಶ್ರೀ/ಶ್ರೀಮತಿ: ________________________________________ ಇವರ ವರ್ಗಾವಣೆಗೆ ಸಂಬಂಧಿಸಿದಂತೆ ದೃಡೀಕರಣ ಪತ್ರ

1. ವರ್ಗಾವಣೆ ಶಾಸನ ಹೊರಡಿಸಿದ ನಂತರ ಅಂದರೆ ದಿನಾಂಕ:01-09-2007 ರ ನಂತರ ಇದೇ ಮೊದಲ ಬಾರಿ ಪರಸ್ಪರ ವರ್ಗಾವಣೆಯಾಗಿರುತ್ತದೆ
2. ಸದರಿ ಶಿಕ್ಷಕರು ಇದೇ ಮೊದಲ ಬಾರಿಗೆ ಘಟಕದ ಹೊರಗಿನ ವರ್ಗಾವಣೆ ಬಯಸಿರುತ್ತಾರೆ.
3. ಸದರಿ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಪರಿಗಣಿಸಿರುವುದಿಲ್ಲ.
4. ಸದರಿ ಶಿಕ್ಷಕರು ಪ್ರಸ್ತುತ ಸ್ಥಳದಲ್ಲಿ 3 ವರ್ಷ ಸೇವೆಯನ್ನು ಪೂರೈಸಿರುತ್ತಾರೆ ಹಾಗೂ ಅವರ ನಿವೃತ್ತಿಗೆ ಇನ್ನು ಮೂರು ವರ್ಷಗಳಿಗಿಂತ ಅಧಿಕ ಸೇವಾ ಅವಧಿಯು ಇರುವುದು
5. ಪರಸ್ಪರ ವರ್ಗಾವಣೆಯನ್ನು ಬಯಸಿರುವ ಶಿಕ್ಷಕರ ಮತ್ತು ಈ ಶಿಕ್ಷಕರ ಬೋಧನಾ ವಿಷಯ ಮತ್ತು ಮಾಧ್ಯಮ ಒಂದೇ ಆಗಿರುತ್ತದೆ

ಈ ಮೇಲಿನ ಎಲ್ಲಾ ಅಂಶಗಳು ವರ್ಗಾವಣೆಗೆ ಸಲ್ಲಿಸಿದ ದಾಖಲೆಗಳು/ಮಾಹಿತಿಗಳು ಸದರಿ ಶಿಕ್ಷಕರುಗಳ ಸೇವಾ ಪುಸ್ತಕದೊಂದಿಗೆ ಹಾಗೂ ಇತರೆ ದಾಖಲೆಗಳೊಂದಿಗೆ ಖುದ್ದಾಗಿ ಪರಿಶೀಲಿಸಿ ಪ್ರಮಾಣೀಕರಿಸುತ್ತೇನೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು

________________

ಜಿಲ್ಲೆ __________